ಇ) ಸದರಿ ಕಾಮಗಾರಿ ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಮಂತ್ರಿಗಳು).— ಅ) ೧೯೮೩ರಲ್ಲಿ ಮಳೆಯಿಂದಾಗಿ ಕೆರೆ ಒಡೆದು ಸೇತುವೆ ಧಕ್ಕೆಗೊಂಡಿದ್ದು ಗಮನಕ್ಕೆ ಬಂದಿದೆ. ಆಗ ಈ ರಸ್ತೆಯು ಲೋಕೋಪಯೋಗಿ ಇಲಾಖೆಗೆ ಸೇರಿರಲಿಲ್ಲ.

ಆ) ಸದರಿ ಸೇತುವೆಯನ್ನು ಸಂಚಾರಕ್ಕೆ ಬರುವಂತೆ ತಾತ್ಕಾಲಿಕವಾಗಿ ದುರಸ್ತಿ ಮಾಡಲಾಗಿದೆ.

ಇ) ಈ ಸೇತುವೆಯನ್ನು ಅಪಶ್ಯಕ ದುರಸ್ತಿಗೊಳಿಸುವಂತೆ ಸೂಚನೆ ಕೊಡಲಾಗಿದೆ.

ಶ್ರೀ ಶಿವಶೇಖರಪ್ಪಗೌಡ ಶಿರವಾಳ.—ಮಾನ್ಯ ಅಧ್ಯಕ್ಷರೇ ೧೯೮೫ನೇ ಇಸವಿಯಲ್ಲಿ ಸೇತುವೆ ಒಡೆದು, ಇದು ಎರಡು ಊರಿನ ನಡುವೆ ಇರುವುದರಿಂದ ಜನರು ಓಡಾಡುವುದಕ್ಕೆ ತೊಂದರೆಯಾಗಿರುತ್ತದೆ. ೧೯೮೫ನೇ ಇಸವಿಯಲ್ಲಿಯೇ ಇದನ್ನು ದುರಸ್ತಿಪಡಿಸಲು ಪೈಪ್‌ಗಳನ್ನು ತೆಗೆದುಕೊಂಡು ಬಂದು ಹಾಕಿದ್ದರೂ ದುರಸ್ತಿ ಕೆಲಸವಾಗಿಲ್ಲ. ಕೇಳಿದರೆ ಸಂಭ ಧಪಟ್ಟವರು ಮಾಡುತ್ತೇವೆಂದು ಹೇಳುತ್ತಿರುತ್ತಾರೆ. ಈಗ ತಾತ್ಕಾಲಿಕವಾಗಿ ರಿಪೇರಿ ಮಾಡಿರುತ್ತಾರೆಂದು ಹೇಳಿದರೂ ಸ್ವಲ್ಪ ಕೂಡಾ ಕೆಲಸ ಮಾಡಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ಮಾಡಬೇಕೂ.

ಶ್ರೀ ಹೆಚ್.ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ಇದು ಮೊದಲನೆಯದಾಗಿ ಪಿ.ಡಬ್ಲ್ಯೂ.ಡಿ. ರೋಡ್ ಅಲ್ಲ. ಈ ಸೇತುವೆಯ ದುರಸ್ತಿಗಾಗಿ ನೀರಾವರಿ ಇಲಾಖೆಯಿಂದ ಪಿ.ಡಬ್ಲ್ಯೂ.ಡಿ. ಇಲಾಖೆಗೆ ೭೫ ಸಾವಿರ ರೂಪಾಯಿಗಳ ಹಣವನ್ನು ಕೊಟ್ಟಿದ್ದಾರೆ. ಈ ವರ್ಷ ಸೇತುವೆಯ ಕೆಲಸವನ್ನು ಮಂಗಿಸಲು ನಿರ್ಣಯ ಮಾಡಿದ್ದೇವೆ. ಸೇತುವೆಯ ಕೆಲಸವನ್ನು ಮಾಡಿ ಮುಗಿಸಿಕೊಡುತ್ತೇವೆ.

ಶ್ರೀ ಶಿವಶೇಖರಪ್ಪಗೌಡ ಶಿರವಾಳ.—ರಿಪೇರಿ ಏನೂ ಮಾಡಲಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಈಗ ಮಾಡಿಕೊಡುತ್ತೇವೆಂದು ಹೇಳಿದ್ದೇನಲ್ಲ. ಇದು ನಮ್ಮ ಇಲಾಖೆಗೆ ಸಂಬಂಧಪಟ್ಟದ್ದಲ್ಲ. ನೀರಾವರಿ ಇಲಾಖೆಗೆ ಸಂಬಂಧಪಟ್ಟದ್ದಾಗಿರುತ್ತದೆ. ಈಗ ನಾವು ವಹಿಸಿಕೊಂಡು ೭೫ ಸಾವಿರ ಖರ್ಚು ಮಾಡಿ ದುರಸ್ತಿ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಮಾಡಿ ಕೊಡುತ್ತೇವೆಂದು ಹೇಳುತ್ತೇನೆ.

ರಾಜ್ಯದಲ್ಲಿ ಸರ್ಕಾರಿ ಹಾಗೂ ಖಾಸಗಿಯ ಸಂಸ್ಥೆಯವರು ನಡೆಸುತ್ತಿರುವ ಪ್ರೌಢಶಾಲೆ ವಿದ್ಯಾಲಯಗಳೂ ಹಾಗೂ ಶಾಲೆಗಳು

೬೩೭. ಶ್ರೀ ಜಿ. ಚಂದ್ರಕಾಂತ ಬೆಲ್ಲದ (ಧಾರವಾಡ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಸರ್ಕಾರದಿಂದ ಹಾಗೂ ಖಾಸಗಿಯವರಿಂದ ನಡೆಯುವ ಸಂಸ್ಕೃತ ಕಾಲೇಜು ಕಿರಿಯ ಕಾಲೇಜು, ಪ್ರೌಢಶಾಲೆಗಳು ಹಾಗೂ ಇತರ ಶಾಲೆಗಳ ಸಂಖ್ಯೆ ಎಷ್ಟು ?

ಆ) ಸಂಸ್ಕೃತ ಹಾಗೂ ಎಲ್ಲಾ ಅಭ್ಯಾಸ ಕ್ರಮದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬೋಧಿಸುತ್ತಿರುವರೇ?

ಇ) ಹಾಗಿದ್ದಲ್ಲಿ ಈ ಮೇಲ್ಕಂಡ ಕಾಲೇಜುಗಳಿಗೆ ಹಾಗೂ ಶಾಲೆಗಳಿಗೆ ಒಂದು ವರ್ಷಕ್ಕೆ ತಗಲುವ ವೆಚ್ಚ ವೆಷ್ಟು?

ಈ) ಸದರಿ ಕಾಲೇಜುಗಳಲ್ಲಿ ಹಾಗೂ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದೆಯೇ?

ಉ) ಹಾಗಿದ್ದಲ್ಲಿ, ಈ ಕೊರತೆಯನ್ನು ಹೋಗಲಾಡಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳ)

ಅ) ಶಾಲೆಗಳು	ಸರ್ಕಾರಿ	ಖಾಸಗಿ
೧. ಸಂಸ್ಕೃತ ಕಾಲೇಜುಗಳು	೩	೬
೨. ಕಿರಿಯ ಕಾಲೇಜುಗಳು	೩೮೧	೪೬೬
೩. ಪ್ರೌಢಶಾಲೆಗಳು	೧೪೨೬	೨೬೫೭
೪. ಪ್ರಾಥಮಿಕ ಶಾಲೆಗಳು	೩೫೭೪೨	೨೯೦೦
೫. ಸಂಸ್ಕೃತ ಪಾಠಶಾಲೆಗಳು	—	೨೪೮
ಒಟ್ಟು	೪೪೪೮೨	

ಆ) ಹೌದು

ಇ) ೧. ಸಂಸ್ಕೃತ ಕಾಲೇಜುಗಳು ಹಾಗೂ ಪಾಠಶಾಲೆಗಳಿಂ ರೂ. ೭೪,೧೫,೭೮೮

೨. ಕಿರಿಯ ಕಾಲೇಜುಗಳು ಹಾಗೂ ಪ್ರೌಢ ಶಾಲೆಗಳು ರೂ. ೮೬,೧೧,೬೭,೪೪೮

೩. ಪ್ರಾಥಮಿಂಕ ಶಾಲೆಗಳು ರೂ. ೧೭೮,೬೫,೮೩,೪೯೩

ಒಟ್ಟು ರೂ. ೨೬೫,೫೧,೬೬,೭೯೯

ಈ) ಕೆಲವು ಶಾಲಾ ಕಾಲೇಜುಂಗಳಲ್ಲಿ ಶಿಕ್ಷಕರ ಕೊರತೆ ಇದೆ.

ಉ) ಹೌದು.—ಪಶ್ನಾನ್ಯ ಸದಸ್ಯರು (ಇ) ಪ್ರಶ್ನೆಯಂಲ್ಲಿ ಯಾವ ವರ್ಷಕ್ಕೆ ಎಂದು ಕೇಳಿಲ್ಲ. ವೆಚ್ಚ ಪ್ರತಿ ವರ್ಷ ಹೆಚ್ಚು ಕಡಿಮೆ ಆಗುತ್ತಿರುತ್ತದೆ. ಆದ್ದರಿಂದ ಇಲ್ಲಿ ಕೊಟ್ಟಿರುವ ಅಂಕಿ ಸಂಖ್ಯೆಗಳು ೧೯೮೪-೮೫ಕ್ಕೆ ಸಂಬಂಧಪಟ್ಟದ್ದುದು ಇದನ್ನು ಮಾನ್ಯ ಸದಸ್ಯರು ಗಮನಿಸಬೇಕು.

ಶ್ರೀ ಚಂದ್ರಕಾಂತ ಜಿ. ಬೆಲ್ಲದ.—ಮಾನ್ಯ ಸಚಿವರು ಒಟ್ಟು ಖರ್ಚಾಗತಕ್ಕ ಹಣದ ಬಗ್ಗೆ ಏನೂ ಹೇಳಲಿಲ್ಲ. ಸಾಮಾನ್ಯ ಜನತೆಗೆ ಪ್ರಯೋಜನವಾಗುವ ದೃಷ್ಟಿಯಂಲ್ಲಿ ಹಣ ಬಳಕೆಯಾಗುತ್ತಿದೆಯೇ? ಖರ್ಚು ಮಾಡುತ್ತಿರುವ ಹಣದಿಂದ ಸಮಾಜದ ಬೆಳವಣಿಗೆಗೆ, ಸಮಾಜದ ಅಭಿವೃದ್ಧಿಗೆ ಪ್ರಯೋಜನ ಇದೆಯೇ ಹೇಗೆ?

ಶ್ರೀ ಡಿ. ಮಂಜುನಾಥ್.—ಶಿಕ್ಷಣ ಇಲಾಖೆ ಬಹಳ ದಿವಸಗಳಿಂದ ನಡೆದುಕೊಂಡು ಬರುತ್ತಿದೆ. ಆದರೆ ಸಮಾಜಕ್ಕೆ ಪ್ರಯೋಜನವಾಗುವ ದೃಷ್ಟಿಯಿಂದ ಹಣ ಖರ್ಚು ಮಾಡುವುದರಲ್ಲಿ ಕೆಲವು ನ್ಯೂನ್ಯತೆಗಳಿವೆ; ಅದನ್ನು ಸರಿಪಡಿಸುವುದಕ್ಕೆ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತದೆ.

ಶ್ರೀ ಬಿ.ಜಿ. ಕೊಟ್ರಪ್ಪ.—ನಾನು ಒಂದು ಕ್ರಯಾಲೋಪ ಎತ್ತುತ್ತೇನೆ. ಎಪ್ ಆವರು ಪೇಪರ್ ಡಿಸ್ಟ್ರಿಬ್ಯೂಟ್ ಮಾಡಿದರು. ಇದಕ್ಕೆ ತಮ್ಮ ಅನುಮತಿ ತೆಗೆದುಕೊಂಡು ಮಾಡಿದರೋ ಇಲ್ಲವೋ ಗೊತ್ತಿಲ್ಲ.

ಅಧ್ಯಕ್ಷರು.—ಇರಲಿ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ.—ಎಷ್ಟು ಹಣ ಖರ್ಚು ಮಾಡುತ್ತಿದ್ದೀರೆಂದು ಹೇಳಲಿಲ್ಲ.

ಶ್ರೀ ಡಿ. ಮಂಜುನಾಥ್.—ಹಣ ಖರ್ಚು ಮಾಡುವ ಬಗ್ಗೆ ಅಂಕಿ-ಸಂಖ್ಯೆ ಕೊಟ್ಟಿದೆ. ಇದು ೧೯೮೪-೮೫ಕ್ಕೆ ಸಂಬಂಧಪಟ್ಟದ್ದುದು. ಈ ಸಾರಿ ಇನ್ನೂ ಜಾಸ್ತಿ ಖರ್ಚು ಮಾಡುತ್ತಿದ್ದೇವೆ. ಸರಿಯಾದ ಅಂಕಿಅಂಶ ಈಗ ನನ್ನ ಹತ್ತಿರ ಇಲ್ಲ.